ರಹಮತ್ ತರೀಕೆರೆ

# ಬೂಸಾ ಪ್ರಕರಣ: ಚಳವಳಿಗಳ ತಾಯಿ

**1970**ರ ದಶಕದಲ್ಲಿ ಹುಟ್ಟಿದ ಜನಪರ ಸಂಘಟನೆ ಮತ್ತು ಚಳವಳಿಗಳ ಚರಿತ್ರೆಯನ್ನು ಬರೆಯುವವರು, ತಪ್ಪದೇ ಉಲ್ಲೇಖಿಸುವ ವಿದ್ಯಮಾನಗಳಲ್ಲಿ ಬೂಸಾ ಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಹಲವು ಪಲ್ಲಟಗಳಿಗೆ ಕಾರಣವಾದ ಈ ವಿದ್ಯಮಾನದ ಮೂಲದಲ್ಲಿ ಇದ್ದವರು, ಬಿಬಿ ಎಂದೇ ಜನಪ್ರಿಯರಾಗಿದ್ದ ಬಿ. ಬಸವಲಿಂಗಪ್ಪನವರು. ಅವರು ಹುಟ್ಟಿ ಈಗ ಶತಮಾನ ತುಂಬಿದೆ; ಬೂಸಾ ಪ್ರಕರಣಕ್ಕೂ ಅರ್ಧಶತಮಾನ ಸಮೀಪಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸದರಿ ವಿದ್ಯಮಾನವನ್ನು ಸಾಹಿತ್ಯಿಕ ನೆಲೆಯಲ್ಲಿ ಹಿಂತಿರುಗಿ ನೋಡುವ ಯತ್ನ ಈ ಲೇಖನ.

ಬೆಂಗಳೂರು ನಗರಪಾಲಿಕೆ ಸದಸ್ಯರಾಗಿ, ಶಾಸಕರಾಗಿ, ಬಿ.ಡಿ. ಜತ್ತಿಯವರ ಸಂಪುಟದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ ಬಿಬಿಯವರು, ಬೂಸಾ ಪ್ರಕರಣ ನಡೆದಾಗ (1973) ದೇವರಾಜ ಅರಸು ಮಂತ್ರಿಮಂಡಲದಲ್ಲಿ ಪೌರಾಡಳಿತ ಸಚಿವರಾಗಿದ್ದರು. ಖಡಕ್ ಆಡಳಿತಗಾರರಾಗಿ ಹೆಸರಾಗಿದ್ದ ಅವರು, ದಲಿತರು ಮಲ ಹೊರುವುದನ್ನು ನಿಷೇಧಿಸುವ ಕಾನೂನು ಜಾರಿಗೊಳಿಸಿದ್ದು ಒಂದು ಕ್ರಾಂತಿಕಾರಕ ಹೆಜ್ಜೆಯಾಗಿತ್ತು. ಅಂಬೇಡ್ಕರ್–ಪೆರಿಯಾರ್ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅವರು, ನೇರ ನಡೆನುಡಿಗೆ ಖ್ಯಾತರಾಗಿದ್ದರು. ಅವರು 'ದೇವರ ಪಟಗಳನ್ನು ಚರಂಡಿಗೆ ಎಸೆಯಿರಿ', 'ಮೇಲ್ಜಾತಿಯ ಹುಡುಗಿಯರನ್ನು ವರಿಸಿ ಜಾತಿವ್ಯವಸ್ಥೆ ಮುರಿಯಿರಿ' ಮುಂತಾಗಿ ಯುವಕರಿಗೆ ಕರೆಗೊಡುತ್ತಿದ್ದರು; ಗಾಂಧಿಗೆ ಸತ್ಯದ ಅರಿವಿರಲಿಲ್ಲ ಎಂದು ಟೀಕಿಸುತ್ತಿದ್ದರು. ದಿಟ್ಟತನದಿಂದಲೂ ವೈಚಾರಿಕತೆಯಿಂದಲೂ ಕೂಡಿದ ಹೇಳಿಕೆಗಳು, ಸಂಪ್ರದಾಯಸ್ಥರಲ್ಲಿ ಆಕ್ರೋಶ ಹುಟ್ಟಿಸುತ್ತಿದ್ದವು. ಹೊಸತಲೆಮಾರಿನ ದಲಿತರಲ್ಲೂ ವಿಚಾರವಂತರಲ್ಲೂ ಸಾಮಾಜಿಕ ಎಚ್ಚರ ಮತ್ತು ಹೋರಾಟದ ಪ್ರಜ್ಞೆ ಮೂಡಿಸುತ್ತಿದ್ದವು.

## ಹೊಸ ಅಲೆಗಳು

ಬೂಸಾ ಸಾಹಿತ್ಯ ಪ್ರಕರಣವು ಸಂಭವಿಸಿದ ಹಿನ್ನೆಲೆ ಹೀಗಿದೆ: ಮೈಸೂರಿನ 'ಅಂಬೇಡ್ಕರ್ ಸ್ಕೂಲ್ ಆಫ್ ಥಾಟ್ಸ್' ಸಂಸ್ಥೆಯಲ್ಲಿ, 'ಹೊಸ ಅಲೆಗಳು' ಎಂಬ ವಿಷಯದ ಮೇಲೆ ವಿಚಾರಗೋಷ್ಠಿ (ನವೆಂಬರ್ 1973) ಏರ್ಪಾಟಾಗಿತ್ತು. ಅದರಲ್ಲಿ ವಕೀಲರಾದ ಸಂಜೀವಯ್ಯನವರು ನೆರೆದಿದ್ದ ತರುಣರಿಗೆ